೬ ಸುಳ್ಯ ತಾಲ್ಲೂಕಿನ ತೊಡಿಕಾನ ಗ್ರಾಮದಲ್ಲಿ ಕಾರ್ಮಿಕರ ಕಾಲೋನಿಯೊಳಗೆ ಶ್ರೀ ತೀರ್ಥರಾಮ ಮತ್ತು ಅವನ ಗುಂಪಿನವರು ಕೋವಿ ಹಿಡಿದು ಹಲ್ಲೆ ಮಾಡುತ್ತಿರುವುದು.

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ ತೊಡಿಕಾನ ಗ್ರಾಮದಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರು ಕಾರ್ಮಿಕರ ಕಾಲನಿ ಇದ್ದು, ಈ ಕಾಲೋನಿಯಲ್ಲಿ ಸುಮಾರು ೧೦೦ ಕುಟುಂಬಗಳ ೬೦೦ ಜನರು ವಾಸ್ತವಿಸಿಕೊಂಡು ಬರುತ್ತಿರುವರು. ಈ ಕಾಲೋನಿಯು ಸಂಪೂರ್ಣ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಇಲಾಖೆಯವರ ಸ್ವಾಮ್ಯತೆಗೆ ಒಳಪಟ್ಟಿರುವುದು. ಆದರೂ, ಈ ರಬ್ಬರು ಕಾರ್ಮಿಕರ ಕಾಲೋನಿಯ ಒಳಗಡೆ ರಾತ್ರಿ–ಹಗಲು ಅದೇ ಗ್ರಾಮದ ನಿವಾಸಿಯಾದ ಶ್ರೀ ತೀರ್ಥರಾಮ ಮತ್ತು ಅವರ ಗುಂಪಿನವರು, ಕೋವಿ ಹಿಡಿದು ಕೊಂಡು ಬಂದು ಆಗಾಗ ಬೆದರಿಕೆ ಹಾಕುತ್ತಿರುವುದು, ಗುಂಪು ಘರ್ಷಣೆಗೆ ಅವಕಾಶವಾಗುವಂತೆ, ಗಲಾಟೆ ಮಾಡುತ್ತಿರುವುದು, ಒಂದು ವರ್ಷದಿಂದ ನಡೆಯುತ್ತಿತ್ತು. ಈಗ ಕೆಲವು ದಿನಗಳಿಂದ ಶ್ರೀ ತೀರ್ಥರಾಮ ಮತ್ತು ಗುಂಪಿನವರು ಈ ಕಾಲೋನಿಯ ಮೇಲೆ ಪುನಃ ಗಲಾಟೆ ಮಾಡುತ್ತಿರುವುದಾಗಿ ಪೋಲೀಸು ಠಾಣೆಗೆ ದೂರು ಸಲ್ಲಿಸಲಾಗಿದೆ ಈ ಬೆದರಿಕೆ ಗುಂಪಿಗೆ, ತೊಡಿಕಾನ ಘಟಕದ ಅರಣ್ಯ ಅಭಿವೃದ್ಧಿ ರಬ್ಬರು ನಿಗಮದ ಅರಣ್ಯ ಪಾಲಕರಾದ ಶ್ರೀ ರಾಧಾಕೃಷ್ಣ ಎಂಬುವರು, ರಬ್ಬರು ಕಾರ್ಮಿಕರಿಗೆ ರಕ್ಷಣೆ ನೀಡುವ ಬದಲು ಶ್ರೀ ತೀರ್ಥರಾಮ ಎಂಬುವರ ಗುಂಪಿನಲ್ಲಿ ಶಾಮೀಲಾಗಿ ಇರುವುದು ತಿಳಿದು ಬರುತ್ತದೆ. ಇಲ್ಲಿಯ ಪರಿಸ್ಥಿತಿಯಿಂದ ಘರ್ಷಣೆ, ಗಲಾಟೆ, ಲೂಟಣಗೊಂಡು ಉಭಯ ಕಡೆಯಿಂದ, ಪ್ರಾಣಹಾನಿ ಸಂಭವಿಸುವವರೆಗೆ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ತಮ್ಮಿಳ ನಿವಾಸಿತ ರಬ್ಬರು ಕಾರ್ಮಿಕರಿಗೆ ರಕ್ಷಣೆ ನೀಡಿ ನ್ಯಾಯ ಒದಗಿಸುವಂತೆ ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—(ಶಿಕ್ಷಣ ಸಚಿವರು).—ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ತರಿಸಿಕೊಡುತ್ತೇನೆ.

೭, ಚಿಕ್ಕಪೇಟೆಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಗೆ ನೀರಿನ ಹಾಗೂ ಇತರ ಸೌಲಭ್ಯ ಗಳನ್ನು ಒದಗಿಸುವುದು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ,

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ನೀರಿನ ಸೌಕರ್ಯವಿಲ್ಲ. ಇದರಿಂದ ಮಕ್ಕಳಿಗೆ ಬಹಳ ತೊಂದರೆಯಾಗಿದೆ ಈ ಶಾಲೆಯ ಕಿಟಕಿಗಳನ್ನು ದುರಸ್ತಿ ಮಾಡಿಸುವುದು ಅಗತ್ಯವಾಗಿದೆ, ೧೯೪೪ರಿಂದ ಇಲ್ಲಿಯವರೆಗೆ ಈ ಶಾಲೆಗೆ ಸುಣ್ಣ ಬಣ್ಣವನ್ನು ಹೊಡೆಸಿಲ್ಲ. ಈ ಶಾಲೆಯಲ್ಲಿ ದೀಪದ ವ್ಯವಸ್ಥೆ ಇಲ್ಲ. ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತುಕೊಳ್ಳುತ್ತಾರೆ. ಈ ಶಾಲೆಯಲ್ಲಿ ಇನ್ನೂ ಹಲವಾರು ಸಮಸ್ಯೆಗಳಿದ್ದು ಅವುಗಳನ್ನು ಇದುವರೆಗೂ ಬಗೆಹರಿಸಿಲ್ಲ. ಈ ಶಾಲೆಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ವಿದ್ಯಾ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ.ಜೆಟ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ,

ಬೆಂಗಳೂರು ನಗರದ ಚಿಕ್ಕಪೇಟೆಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಯಲ್ಲಿ ನೀರಿನ ಸೌಕರ್ಯ, ಕಿಟಕಿಗಳ ದುರಸ್ತಿ ಹಾಗೂ ೧೯೪೪ರಿಂದ ಸುಣ್ಣ ಬಣ್ಣ ಹೊಡೆಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

೧೯೯೦–೯೧ರ ಸಾಲಿನ ಆಯವ್ಯಯದಲ್ಲಿ ಈ ಬಾಬ್ತಿಗೆ ಒದಗಿಸಿರುವ ಹಣದಲ್ಲಿ ಆದ್ಯತೆಯ ಮೇರೆಗೆ ಈ ಶಾಲೆಯ ದುರಸ್ತಿ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಲು ಲೋಕೋಪಯೋಗಿ ಇಲಾಖೆಗೆ ತಿಳಿಸಲಾಗುವುದು.

೮. ಕಬ್ಬಿನ ದರ ನಿಗದಿ ಪಡಿಸುವುದು

ಶ್ರೀ ಎನ್. ತಮ್ಮಣ್ಣ (ಕೆರಗೋಡು).—ಮಾನ್ಯ ಅಧ್ಯಕ್ಷರೆ. ಮಂಡ್ಯ ಜಿಲ್ಲೆಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳಿದ್ದು, ಈ ವ್ಯಾಪ್ತಿಗೆ ಲಕ್ಷಾಂತರ ರೈತ ಕುಟುಂಬಗಳು ಒಳಪಡುತ್ತವೆ. ಕಬ್ಬಿನ